ರಾಯಚೂರು ತಾಲ್ಲೂಕಿಗೆ 2005–06ನೇ ಸಾಲಿನಲ್ಲಿ ಬಿಡುಗಡೆಯಾದ 1ನೇ ತ್ರೈಮಾಸಿಕ ಅನುದಾನ ಕಂತಿನಲ್ಲಿ ಯೋಜನೇತರ ಪ್ರಾಥಮಿಕ ಶಿಕ್ಷಣ '22–02–01' ರ ಲೆಕ್ಕಶೀರ್ಷಿಕೆಯಲ್ಲಿ ರೂ. 222.93 ಲಕ್ಷ ಮತ್ತು ಯೋಜನೇತರ ಪ್ರೌಢ ಶಿಕ್ಷಣ '22–02–02'ರ ಲೆಕ್ಕಶೀರ್ಷಿಕೆಯಲ್ಲಿ ರೂ. 44.99 ಲಕ್ಷ ಅನುದಾನ ಹೀಗೆ ಒಟ್ಟು ರೂ. 267.92 ಲಕ್ಷ ಅನುದಾನ ಮಂಜೂರಾತಿಯಾಗಿದ್ದು ಇದರಲ್ಲಿ ಮಾಹೆ ಮಾರ್ಚ್ 2005 ಮತ್ತು ಏಪ್ರಿಲ್ 2005ರ ವೇತನ ಹಾಗೂ 2004–05ರ ಎಲ್ಲಾ ತರಹದ ಬಾಕಿ ಬಿಲ್ಲುಗಳು (ವೇತನ ಬಾಕಿ ಕನ್ನಡ ವಾರ್ಷಿಕ ಬಡ್ತಿ ಬಾಕಿ ಹಾಗೂ ಇತ್ಯಾದಿ ಬಾಕಿ ಬಿಲ್ಲುಗಳು) ಸೇರಿಕೊಂಡು ಪ್ರಾಥಮಿಕ/ಪ್ರೌಏ ಶಿಕ್ಷಕರ ವೇತನ ಪಾವತಿಸಲಾಗಿದೆ. ಮಾಹೆ ಏಪ್ರಿಲ್ 2005ರ ರಾಯಚೂರು ತಾಲ್ಲೂಕಿನ ಪ್ರಾಥಮಿಕ/ಪ್ರೌಢ ಶಿಕ್ಷಕರ ವೇತನ ಪಾವತಿಸಲು ಇನ್ನೂ ರೂ. 15.00 ಲಕ್ಷ ಅನುದಾನದ ಕೊರತೆಯಿದೆ. ಶೀಘ್ರವೇ ಅನುದಾನ ಬಿಡುಗಡೆಯಾಗಲಿದ್ದು. ಎಲ್ಲಾ ಶೀಕ್ಷರಿಗೂ ಮಾಸಿಕ ವೇತನವನ್ನು ಬಿಡುಗಡೆ ಮಾಡಲಾಗುವುದು.

ಮಾನ್ಯ ಚೇರ್ಮನ್‌ರವರೇ, ಇದು ನಿಧಾನವಾಗಿದೆ ನಿಜ. ಈಗ ನಮ್ಮ ಇಲಾಖೆಯ ಕಾರ್ಯದರ್ಶಿಯವರೇ, ಅವರ ಜಡ್.ಪಿ.ಯ ಆಡಳಿತಾಧಿಕಾರಿಯಾಗಿ ನೇಮಕವಾಗಿದ್ದಾರೆ. ನಾನು ಬೆಳ್ಳಿಗ್ಗೆ ಕೂಡ ಮಾತನಾಡಿದ್ದೇನೆ. ಅದನ್ನು ಆದಷ್ಟು ಬೇಗ ಅವರು ಬಿಡುಗಡೆ ಮಾಡುತ್ತಾರೆ.

ಶ್ರೀ ಎ.ಪಾಪರೆಡ್ಡಿ : ಮಾನ್ಯ ಚೇರ್ಮನ್‌ರವರೇ, ಈಗಾಗಲೇ ಮೂರು ತಿಂಗಳು ಆಯಿತು. ಅಲ್ಲಿರುವಂತಹ ಶಿಕ್ಷಕರಿಗೆ ಬಹಳ ತೊಂದರೆಯಾಗಿದೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ ತಕ್ಷಣ ಶಿಕ್ಷಕರಿಗೆ ಹಣ ಬಿಡುಗಡೆ ಆಗಬೇಕು, ಏಕೆಂದರೆ ಹಳ್ಳಿಗಳಲ್ಲಿ ಪಾಠ ಹೇಳಿಕೊಡುವಂತಹ ಶಿಕ್ಷಕರು ಇವತ್ತು ಅವರಿಗೆ ಸಂಬಳವಿಲ್ಲದೇ, ಅವರು ಹಳ್ಳಿಗಳಲ್ಲಿ ಮಕ್ಕಳಿಗೆ ಹೇಗೆ ಪಾಠವನ್ನು ಕಲಿಸಬೇಕು? ಅವರು ಕಷ್ಟದಲ್ಲಿರುವಾಗ ಮಕ್ಕಳಿಗೆ ಬೋಧನೆಯನ್ನು ಮಾಡುವುದು ಕಷ್ಟವಾಗುತ್ತದೆ. ಆದುದರಿಂದ ಸರ್ಕಾರಕ್ಕೆ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ, ತಕ್ಷಣ ಹಣವನ್ನು ಬಿಡುಗಡೆ ಮಾಡಿ, ಶಿಕ್ಷಕರಿಗೆ ಸಂಬಳವನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಚೇರ್ಮನ್ : ಆಯಿತು. ಮಾನ್ಯ ಸಚಿವರು ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡಿ ಕೊಡುತ್ತೇವೆಂದು ಹೇಳಿದ್ದಾರೆ.

(ಇ) ವಿಷಯ : ಬೆಂಗಳೂರಿನ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘವು ಸದಸ್ಯರಿಂದ ನಿವೇಷನಕ್ಕಾಗಿ ಹಣ ಪಡೆದಿದ್ದರೂ, ನಿವೇಶನ ವಿತರಿಸದೇ ಸತಾಯಿಸುತ್ತಿರುವ ಬಗ್ಗೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಚೇರ್ಮನ್‌ರವರೇ, ನಾನು ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಂತಹ ಅವ್ಯವಹಾರದ ಬಗ್ಗೆ ಮಾನ್ಯ ಸಚಿವರ ಗಮವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) (ಸಹಕಾರ ಸಚಿವರ ಪರವಾಗಿ) : ಮಾನ್ಯ ಚೇರ್ಮನ್‌ರವರೇ, ನಾನು ತಮ್ಮ ಅಪ್ಪಣೆಯ ಮೇರೆಗೆ ಮಾನ್ಯ ಸಹಕಾರ ಸಚಿವರ ಪರವಾಗಿ ಈ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಉತ್ತರ

ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದ್ದು 1980ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದೆ. ಸಂಘದಲ್ಲಿ 1090 ಜನ ಸದಸ್ಯರಿರುತ್ತಾರೆ. ಪ್ರಥಮದಲ್ಲಿ ಈ ಸಂಘದ ಸದಸ್ಯರು ಖಾಸಗಿ ಅಭಿವೃದ್ದಿದಾರರಾದ ಶ್ರೀ ಅಬ್ದುಲ್ ಖುದ್ದೂಸ್ ಎನ್ನುವವರು ಅಭಿವೃದ್ಧಿಪಡಿಸಿದ್ದ ಗೊಟ್ಟಿಗೆರೆ ಬಡಾವಣೆಯಲ್ಲಿ 37 ನಿವೇಶನಗಳನ್ನು ಖರೀದಿಸಿರುತ್ತಾರೆ. ಇ ಬಡಾವಣೆಯನ್ನು ಸಂಘದ ಹಣದಿಂದ ಅಭಿವೃದ್ದಿಪಡಿಸಿರುವುದಿಲ್ಲ. ಆದರೆ ಸದಸ್ಯರಿಂದ ಸಂಗ್ರಹಿಸಿದ ಠೇವಣಿಯಿಂದ ಸಂಘವು ಈ ಬಡಾವಣೆ ಅಭಿವೃದ್ದಿ ವೆಚ್ಚಕ್ಕೆಂದು ರೂ.9,07,086/– ಗಳನ್ನು ಪಾವರಿಸಿದ್ದು, ಈ ಲೆಕ್ಕ ಹೊಂದಾಣಿಕೆಯಾಗಬೇಕಾಗಿದೆ.

ಆನಂತರ ಈ ಸಂಘವು, ಅದರ ಸದಸ್ಯರಿಗೆ ನಿವೇಶನ ನೀಡುವ ಉದ್ದೇಶದಿಂದ ಬೆಂಗಳೂರಿನ ಕೆಂಗೇರಿ, ರಾಚೇನಹಳ್ಳಿ ಮತ್ತು ಅಂಚೆಪಾಳ್ಯ ಬಡಾವಣೆ ನಿರ್ಮಿಸಲು ರೂ. 67,61,675/– ಅನ್ನು ಸದಸ್ಯರಿಂದ ನಿವೇಶನ ಮುಂಗಡವಾಗಿ ಸಂಗ್ರಹಿಸಿರುತ್ತದೆ.

1. ಕೆಂಗೇರಿ ಬಡಾವಣೆ

ಈ ಬಡಾವಣೆಯಲ್ಲಿ 125 ನಿವೇಶನಗಳ ಖರೀದಿಗಾಗಿ, ದಿನಾಂಕ 15–10–1997ರಂದು ಅಭಿವೃದ್ಧಿದಾರರಾದ ಶ್ರೀ ಗಾಯತ್ರಿ ಡೆವಲಪರ್ಸ್‌ರವರೊಂದಿಗೆ ಒಪ್ಪಂದ ಮಾಡಿಕೊಂಡು ರೂ.20.00 ಲಕ್ಷಗಳನ್ನು ಪಾವತಿ ಮಾಡಲಾಗಿತ್ತು. ಆದರೆ ಈ ಬಡಾವಣೆ ಅಭಿವೃದ್ದಿ ಸಾಧ್ಯವಾಗದ ಕಾರಣ ನೀಡಿದ್ದ ಮುಂಗಡ ರೂ. 20.00 ಲಕ್ಷಗಳನ್ನು ದಿನಾಂಕ 1–10–2001ರಂದು ಸಂಘವು ಹಿಂದಕ್ಕೆ ಪಡೆದಿರುತ್ತದೆ. ಈ ಬಡಾವಣೆಗೆ 4 ಸದಸ್ಯರಿಂದ 12.00 ಲಕ್ಷ ರೂಪಾಯಿಗಳ ಠೇವಣಿಯನ್ನು ಸಂಗ್ರಹಿಸಿದ್ದು, ಸದರಿ 4 ಸದಸ್ಯರಿಗೆ 5.05 ಲಕ್ಷ ರೂಪಾಯಿಗಳನ್ನು ಸಂಘವು ಹಿಂದಿರುಗಿಸಿದೆ.

2. ರಾಚೇನಹಳ್ಳಿ ಬಡಾವಣೆ

ಈ ಬಡಾವಣೆಯನ್ನು ನಿರ್ಮಿಸಲು ರಾಚೇನಹಳ್ಳಿಯ ಸರ್ವೆ ನಂ.81/3ಬಿ, 81/1,81/3ಎ ಮತ್ತು 81/3 ಗೆ ಸೇರಿದ 7 ಎಕರೆ 11 ಗುಂಟೆ ವ್ಯವಸಾಯ ಜಮೀನನ್ನು ಪಡೆಯಲು ಕೀರ್ತಿ ಅಸೋಸಿಯೇಟ್ಸ್ ಮಾಲೀಕರಾದ ಶ್ರೀ ನಾಗರಾಜ ಗುಪ್ತರೊಡನೆ ಕರಾರು ಮಾಡಿಕೊಂಡು ದಿನಾಂಕ 31–3–1999ರ ಅಂತ್ಯಕ್ಕೆ ಒಟ್ಟು ರೂ.35.00 ಲಕ್ಷ ಮುಂಗಡವನ್ನು ಚೆಕ್ ಮೂಲಕ ಪಾವತಿ ಮಾಡಿರುತ್ತಾರೆ ಆದರೆ ಈ ಜಮೀನು ಬಿ.ಡಿ.ಎ ಮತ್ತು ಕಾರ್ಪೊರೆಷನ್ ಅಭಿವೃದ್ದಿ ನಕ್ಷೆಯಲ್ಲಿ ಸೆಮಿಪಬ್ಲಿಕ್ ಉಪಯೋಗಕ್ಕೆ ಗುರುತಿಸಿದ್ದು, ಈ ಜಮೀನಿನಲ್ಲಿ ಬಡಾವಣೆ ಮಾಡುವುದು ಸೂಕ್ತವಲ್ಲವೆಂದು ಮತ್ತು ಈ ಬಡಾವಣೆಯಲ್ಲಿ ಸಂಘದ ಸದಸ್ಯರಿಂದ ಹೆಚ್ಚಿನ ಬೇಡಿಕೆ ಇಲ್ಲದ ಕಾರಣ ಕೇವಲ 3 ಎಕರೆ 26 ಗುಂಟೆ ಜಮೀನನ್ನು ಅಭಿವೃದ್ದಿ ಪಡಿಸಲು ಸಂಘವು ತೀರ್ಮಾನಿಸಿತ್ತು. ನಂತರ ದಿನಾಂಕ 7–8–2002 ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ರಾಚೇನಹಳ್ಳಿ ಬಡಾವಣೆ ಕರಾರನ್ನು ರದ್ದುಪಡಿಸಿ, ಅಭಿವೃದ್ದಿದಾರರಿಂದ ಹಣ ವಾಪಸ್ಸು ಪಡೆಯಲು ತೀರ್ಮಾನಿಸಿದ್ದು. ಅದರಂತೆ ಇಲ್ಲಿಯವರೆಗೆ ರೂ.8.00 ಲಕ್ಷಗಳನ್ನು ಅಭಿವೃದ್ದಿದಾರರಾದ ಶ್ರೀ ನಾಗರಾಜ ಗುಪ್ತ ಇವರಿಂದ ವಾಪಸ್ಸು ಪಡೆಯಲಾಗಿದೆ. ಈ ಬಡಾವಣೆಗೆ 17 ಸದಸ್ಯರಿಂದ ರೂ. 36,79,675/– ಗಳ ಠೇವಣಿ ಸಂಗ್ರಹಿಸಿದ್ದು, 10 ಜನ ಸದಸ್ಯರಿಗೆ ರೂ. 15.15 ಲಕ್ಷವನ್ನು ಮರುಪಾವತಿ ಮಾಡಲಾಗಿದೆ.

3 ಅಂಚೆಪಾಳ್ಯ ಬಡಾವಣೆ

ಈ ಬಡಾವಣೆ ನಿರ್ಮಿಸಲು ಸಂಘವು 12 ಎಕರೆ 18 ಗುಂಟೆ ಜಮೀನನ್ನು ಖರೀದಿಸಲು ಅಂಚೆಪಾಳ್ಯ ಸರ್ವೆ ನಂ.21/1ರ ಮಾಲೀಕರಾದ ಶ್ರೀ ಬಿ.ವಿ.ನಾಗರಾಜು ಮತ್ತು ಇತರರಿಗೆ ರೂ.24.10 ಲಕ್ಷಗಳನ್ನು ಪಾವತಿ ಮಾಡಿದೆ ಮತ್ತು ಶ್ರೀ ಟಿ.ಎಂ.ಚಿದಾನಂದ ಎನ್ನುವವರನ್ನು ಅಭಿವೃದ್ಧಿದಾರರಾಗಿ ನೇಮಿಸಿಕೊಂಡು ಇವರಿಗೆ ರೂ. 17.50 ಲಕ್ಷ ಮುಂಗಡ ನೀಡಿರುತ್ತದೆ. ಈ ಬಡಾವಣೆ ನಿರ್ಮಿಸಲು ಕರಾರು ಮಾಡಿಕೊಂಡ ಜಮೀನು ಹಸಿರು ಪಟ್ಟಿ ವಲಯದಲ್ಲಿ ಇದ್ದ ಕಾರಣ ಇಲ್ಲಿ ಸಹ ಬಡಾವಣೆ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಬಡಾವಣೆಗೆ ಸಂಬಂಧಿಸಿದಂತೆ 20 ಸದಸ್ಯರಿಂದ ರೂ. 18.72 ಲಕ್ಷ ರೂಪಾಯಿಗಳ ಠೇವಣಿ ಸಂಗ್ರಹಿಸಿದ್ದು 11 ಜನ ಸದಸ್ಯರಿಗೆ ರೂ. 4.30 ಲಕ್ಷಗಳನ್ನು ಹಿಂದಿರುಗಿಸಲಾಗಿದೆ.

ಮೇಲೆ ತಿಳಿಸಿದ ಕಾರಣಗಳಿಂದ ಸಂಘವು ಅದರ ಸದಸ್ಯರಿಗೆ ಯಾವುದೇ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಆದರೆ ನಿವೇಶನ ಠೇವಣಿ ಮಾಡಿದ 25 ಜನ ಸದಸ್ಯರಿಗೆ ಇಲ್ಲಿಯವರೆಗೆ ರೂ. 24.50 ಲಕ್ಷಗಳ ಠೇವಣಿಯನ್ನು ವಾಪಸ್ಸು ಮಾಡಿರುತ್ತದೆ. ಇನ್ನೂ ರೂ. 43,01,675/– ಗಳನ್ನು ಮರುಪಾವತಿ ಮಾಡಬೇಕಾಗಿರುತ್ತದೆ.

ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘ ನಿ., ಬೆಂಗಳೂರು ಇದರ ವ್ಯವಹಾರಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ವಿಚಾರಣೆಯನ್ನು ಸಹಕಾರ ಸಂಘಗಳ ಉಪನಿಬಂಧಕರು–2, ಬೆಂಗಳೂರು ಜಿಲ್ಲೆ, ಬೆಂಗಳೂರು, ಇವರು ನಡೆಸಿ, ವಿಚಾರಣಾ ವರದಿಯನ್ನು ದಿನಾಂಕ 12–1–2004 ರಂದು ಸಲ್ಲಿಸಿರುತ್ತಾರೆ. ಈ ವರದಿಯನ್ನು ಆಧರಿಸಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರು ಕಾಯ್ದೆ ಕಲಂ 68ರ ಆದೇಶವನ್ನು ದಿನಾಂಕ 22–2–2004 ರಂದು ಹೊರಡಿಸಿರುತ್ತಾರೆ.

ವಿಚಾರಣಾ ವರದಿಯಲ್ಲಿ ಸಂಘವು ಅಭಿವೃದ್ಧಿದಾರರಾದ ಶ್ರೀ ನಾಗರಾಜ ಗುಪ್ತ ರವರಿಗೆ ಪಾವತಿಸಲಾದ ಮುಂಗಡ ರೂ. 35.00 ಲಕ್ಷಗಳು, ಇನ್ನೊಬ್ಬ ಅಭಿಬೃದ್ಧಿದಾರರಾದ ಶ್ರೀ ಟಿ.ಎಂ.ಚಿದಾನಂದ ರವರಿಗೆ ಪಾವತಿಸಲಾದ ಮುಂಗಡ ರೂ. 17.50 ಲಕ್ಷಗಳು ಮತ್ತು ಜಮೀನುದಾರರಿಗೆ ಪಾವತಿಸಲಾದ ಮುಂಗಡ ರೂ. 24.10 ಲಕ್ಷ ಸೇರಿ ಒಟ್ಟು ರೂ. 76.60 ಲಕ್ಷಗಳನ್ನು ಮುಂಗಡವಾಗಿ ನೀಡಿರುವ ಬಗ್ಗೆ ಆಕ್ಷೇಪಿಸಿ ಈ ಮುಂಗಡವನ್ನು ವಸೂಲಿ ಮಾಡಲು ಸೂಚಿಸಲಾಗಿತ್ತು.

ಈ ಮುಂಗಡ ಹಣ ರೂ. 76.60 ಲಕ್ಷಗಳ ಪೈಕಿ ರೂ. 8.00 ಲಕ್ಷಗಳನ್ನು ಅಭಿವೃದ್ಧಿದಾರರಾದ ಶ್ರೀ ನಾಗರಾಜ ಗುಪ್ತ ಇವರಿಂದ ಮತ್ತು ರೂ. 24.10 ಲಕ್ಷಗಳನ್ನು ಜಮೀನುದಾರರಿಂದ ಸಂಘವು ವಾಪಸ್ಸು ಪಡೆದಿರುತ್ತದೆ. ಅಭಿವೃದ್ಧಿದಾರರಾದ ಶ್ರೀ ನಾಗರಾಜ ಗುಪ್ತ ಇವರು ನೀಡಿದ್ದ ರೂ. 30.00 ಲಕ್ಷಗಳ ಚೆಕ್ ಬೌನ್ಸ್ ಆಗಿದ್ದು, ಇವರು ಸಂಘವು 2002ನೇ ಸಾಲಿನಲ್ಲಿ ಮ್ಯಾಜಿಸ್ಟೇಟ್ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ : 33972, 33973, 34000.02 ಹಾಗೂ ಪಿ.ಸಿ.ಆರ್. ಸಂಖ್ಯೆ: 3374.02 ಮತ್ತು 834:03ನ್ನು ದಾಖಲಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಇನ್ನೊಬ್ಬ ಅಭಿವೃದ್ಧಿ–ದಾರರಾದ

ಶ್ರೀ ಟಿ.ಎಂ.ಚಿದಾನಂದ ಇವರಿಂದ ರೂ. 17.50 ಲಕ್ಷಗಳು ಇನ್ನೂ ವಸೂಲಿಯಾಗ ಬೇಕಾಗಿರುತ್ತದೆ. ಮತ್ತು ಇವರ ವಿರುದ್ಧ ಕಾನೂನಿನ ಕ್ರಮವನ್ನು ಸಂಘವು ಇನ್ನೂ ಕೈಗೊಂಡಿಲ್ಲ. ಆದರೆ, ಈ ಬಾಬ್ತು ಹಣ ವಸೂಲಾತಿಗೆ ಸಂಘದ ಪದಾಧಿಕಾರಿಗಳಿಗೆ ನೋಟಿಸ್ ನೀಡಿದೆ.

ಸಂಘವು ಯಾವುದೇ ಬಡಾವಣೆಯನ್ನು ಅಭಿವೃದ್ಧಿಪಡಿಸದೇ ಇರುವ ಕಾರಣ ಸದಸ್ಯರಿಗೆ ನಿವೇಶನ ನೀಡಲು ವಿಫಲವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ನೀಡಿರುವ ಮುಂಗಡ ಬಾಕಿ ಒಟ್ಟು ರೂ. 44.50 ಲಕ್ಷಗಳು ಅಭಿವೃದ್ಧಿದಾರರಿಂದ ವಸೂಲಾಗಲು ಬಾಕಿ ಇರುವುದರಿಂದ ನಿವೇಶನ ಠೇವಣಿ ಪಾವತಿ 34 ಜನ ಸದಸ್ಯರಿಗೆ ಠೇವಣಿಯನ್ನು ಅಭಿವೃದ್ಧಿದಾರರಿಂದ ವಸೂಲಿ ಮಾಡಿ ಠೇವಣಿಯನ್ನು ಹಿಂದಿರುಗಿಸಲಾಗುವುದೆಂದು ಸಂಘವು ತಿಳಿಸಿದೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ ನಾವೆಲ್ಲಾ ಇಷ್ಟು ಹೊತ್ತು ರಾಜ್ಯದ ಬೇರೆ ಬೇರೆ ಜನರ ಬಗ್ಗೆ, ಬೇರೆಬೇರೆ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡುತ್ತಿದ್ದೆವು. ಇಂಥ ಒಂದು ಹೊತ್ತಿನಲ್ಲಿ ನಮ್ಮ ಬಗ್ಗೆಯೇ ನಾವು ಚರ್ಚೆ ಮಾಡುತ್ತಿದ್ದೆವು. ಇಂಥ ಒಂದು ಹೊತ್ತಿನಲ್ಲಿ ನಮ್ಮ ಬಗ್ಗೆಯೇ ನಾವು ಚರ್ಚೆ ಮಾಡುವಂಥ ಒಂದು ದುಃಖ ಸನ್ನಿವೇಶದ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ನಮ್ಮ ಉದ್ಧಾರಕ್ಕಾಗಿ ನಮಗೆ ಒಂದು ನಿವೇಶನ ಬೇಕು ಎಂದು ಶಾಸಕರನ್ನು ಸದಸ್ಯರನ್ನಾಗಿ ಮಾಡಿಕೊಂಡು ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘ ರಚನೆಯಾಗಿದೆ. ನಾವೆಲ್ಲಾ 1994ನೇ ಇಸವಿಯಲ್ಲಿ ಚುನಾಯಿತರಾಗಿ ಹೊಸದಾಗಿ ಶಾಸಕರಾಗಿ ಬಂದಿದ್ದೆವು. ನಾನು ಅಯನೂರು ಮಂಜುನಾಥ ಮುಂತಾದವರೆಲ್ಲಾ ಚುನಾಯಿತರಾಗಿ ಬಂದಿದ್ದೆವು. ನಮಗೆ ಬೆಂಗಳೂರಿನಲ್ಲಿ ನಿವೇಶನ ಬೇಡವಾಗಿತ್ತು. ಆದರೂ ಕೂಡ ಸಂಘದ ಸದಸ್ಯರಾಗಲು ಅನೇಕ ಜನ ಸ್ನೇಹಿತರು ಹೇಳಿದರು. ಸಂಘದವರೂ ಸಹ ನೋಟೀಸ್ ಕಳುಹಿಸಿದರು, ನೀವೆಲ್ಲಾ ಸದಸ್ಯರಾಗಿ, ನಿಮಗೆಲ್ಲಾ ನಿವೇಶನ ಕೊಡುತ್ತೇವೆ, ಅದಕ್ಕಾಗಿ ಜಮೀನನ್ನು ಅಲ್ಲಿ ಕೊಂಡುಕೊಂಡಿದ್ದೇವೆ, ಇಲ್ಲಿ ಕೊಂಡುಕೊಂಡಿದ್ದೇವೆ ಎಂದು ಹೇಳಿದರು. ನಾವು ಸುಮಾರು 43 ಜನರು, ಶ್ರೀರಂಗದೇವರಾಯಲು ಎಸ್.ಎಂ.ಸಿದ್ಧಯ್ಯ, ಸುಬ್ಬಯ್ಯ ಶೆಟ್ಟರು, ದಿವಂಗತ ವಸಂತ ಅಸ್ನೋಟಿಕರ್, ಸುಶಿಲ್ ನಮೋಶಿ, ರಾಜಶೇಕರ ಶೀಲಂತ ಸೂರಗಾವಿ, ಎಸ್.ಸಿ. ವಿರೂಪಾಕ್ಷಯ್ಯ, ಎಸ್.ಪಿ.ನಂಜಪ್ಪ, ದಿವಂಗತ ಸೋಮಸುಂದರಂ ಅರಗ ಜ್ಞಾನೇಂದ್ರ, ಅಯನೂರು ಮಂಜುನಾಥ, ಗುರುಮೂರ್ತಪ್ಪ, ರುದ್ರಪ್ಪ, ಎಲ್.ಜಿ.ಹಾವನೂರ್, ಬೆಲ್ಲದೆ, ಮಲ್ಲೇಶ್, ಡಿ.ಬಿ.ರಾಜು, ಜೆ.ಪಿ. ಜವಳಿ ಆರ್.ಎಂ.ಕಲೂತಿ, ಬಸವನಗೌಡ, ಮಾದಪ್ಪ, ಕೇಶವರಾವ್ ನಿಟ್ಟೂರ್‌ಕರ್, ಎಸ್‌ಎಫ್.ಪಾಟೀಲ್, ಲಕ್ಷ್ಮಣ ಬಿ ಬಿರಜಿ, ವಸಂತ ರೆಡ್ಡಿ, ಎಸ್.ಎ.ಜಿದ್ದಿ, ಅಶೋಕ್ ಕಾಟ್ಟಿ ಕಲ್ಲಪ್ಪ ಗಡ್ಡಿ, ಚಂದ್ರಶೇಖರ ನಾಯಕ್, ವೈ.ಎಸ್.ರುದ್ರೇಶ್‌ಗೌಡ, ಕೆ.ವಿರೂಪಾಕ್ಷ ಮುಂತಾದವರೆಲ್ಲಾ ಹಾಲಿ ಮತ್ತು ಮಾಜಿ ಶಾಸಕರು. ನಮ್ಮೆಲ್ಲರಿಂದ ಹಣ ತೆಗೆದುಕೊಂಡು ಸುಮಾರು 67 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಸಂಗ್ರಹ ಮಾಡಿದರು. ಕೂಡಲೇ ನಿವೇಶನಗಳ ವಿತರಣೆಯಾಗಿ ಬಿಡುತ್ತದೆ, ನಿವೇಶನಗಳು ರೆಡಿ ಇವೆ, ನಿಮಗೆ ಯಾವುದು ಬೇಕು ಎಂದು ಅಲ್ಲಿಗೆ ಬಂದು ನೋಡಿ, ಮೂಲೆ ನಿವೇಶನ ಬೇಕೋ,

ಫ್ರಂಟ್ ರೋಡಿಗೆ ಬೇಕೋ ಬಂದು ನೋಡಿ ಎಂದು ಕೇಳಿದರು. ನನ್ನ ಹತ್ತಿರ ದುಡ್ಡು ಇಲ್ಲದೇ ಇದ್ದಂಥ ಶಾಸಕ ನಾನು. ನಾನು ಲೆಜಿಸ್ಲೇಚರ್‌ನಲ್ಲಿ ಸಾಲ ಮಾಡಿ ಹಣ ತೆಗೆದುಕೊಂಡು ಹೋಗಿ ಕೊಟ್ಟೆ. ನನ್ನಂತೆಯೇ ಉಳಿದೆಲ್ಲಾ ಶಾಸಕರುಗಳು ಹಣ ಕೊಟ್ಟರು. ಇವರಲ್ಲಿ ಹಣ ಇದ್ದವರೂ ಇದ್ದಾರೆ, ಎನೂ ಇಲ್ಲದೇ, ಇವತ್ತು ಮಾಜಿ ಶಾಸಕರುಗಳಾಗಿ ಬಸ್ಸಿನಲ್ಲಿ ತಿರುಗಾಡುತ್ತಾ ಇರುವಂಥವರೂ ಕೂಡ ಇದ್ದಾರೆ. ಅವರು ನಮ್ಮನ್ನು ಕಂಡಾಗಲೆಲ್ಲಾ, ಏನಪ್ಪಾ ನೀವೆಲ್ಲಾ ಶಾಸಕರಾಗಿದ್ದೀರಿ, ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದಿಲ್ಲ, ಅವರಿಗೆ ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ, ಇಷ್ಟೊಂದು ಹಣ ಸಂಗ್ರಹಣೆ ಮಾಡಿದ್ದಾರೆ ಎಂದು ಹೇಳುತ್ತಾರೆ. ಈ ಬಗ್ಗೆ ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ಹೇಳಿದ್ದಾರೆ, ಬಿ.ವಿ.ನಾಗರಾಜು ಎನ್ನುವವರಿಗೆ ಜಮೀನು ಖರೀದಿಗೆಂದು 24.10 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ್ದಾರೆ, ಟಿ.ಎಂ. ಚಿದಾನಂದ ಎನ್ನುವ ಡೆವೆಲಪರ್‌ಗೆ 17.50 ಲಕ್ಷ ರೂಪಾಯಿಗಳನ್ನು ಡೆವಲಪ್ ಮಾಡಲಿಕ್ಕಾಗಿ ಕೊಟ್ಟಿದ್ದಾರೆ, ಆಮೇಲೆ ಹೇಳುತ್ತಾರೆ, ಇದು ಹಸಿರು ಪಟ್ಟಿ ವಲಯದಲ್ಲಿ ಬರುವುದರಿಂದ ಇಲ್ಲಿ ನಿವೇಶನಗಳನ್ನು ಮಾಡಲಿಕ್ಕೆ ಆಗಲಿಲ್ಲ ಎಂದು ಹೇಳುತ್ತಾರೆ. ಇವರಲ್ಲಿ ಒಬ್ಬರು ನೀಡಿದ ಚೆಕ್ ಬೌನ್ಸ್ ಆಗಿದೆ. ಚಿದಾನಂದ ಎನ್ನುವ ಡೆವೆಲಪರ್‌ಗೆ , ನಿವೇಶನವನ್ನು ತೆಗೆದುಕೊಳ್ಳದೇನೇ ಡೆವಲಪ್‌ಗೆಂದು 17.50 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಅವರಿಂದ ಹಣ ವಸೂಲಿಗೆ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲಿಲ್ಲವಂತೆ ಸದಸ್ಯರಾದ ನಾವು ಗಲಾಟೆ ಮಾಡಿದ ಮೇಲೆ, ಸಹಕಾರ ಸಂಘಗಳ ಕಾಯ್ದೆಯ ಕಲಂ 64 ರಂತೆ ಎನ್‌ಕ್ವೈರಿ ಆಗುತ್ತದೆ. ಕಲಂ 68ರ ಪ್ರಕಾರ ಇವರು ಕಾನೂನು ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ, ಅದಕ್ಕೆ ಇದೇ ಇಲಾಖೆಯ ಸಚಿವರು ಸ್ಟೇ ಕೊಟ್ಟಿದ್ದಾರೆ. ತಪ್ಪಿತಸ್ಥರನ್ನು ಹಿಡಿದು ಜೈಲಿಗೆ ಹಾಕಿಸಲು ಸರ್ಕಾರಕ್ಕೆ ಯೋಗ್ಯತೆಯಿಲ್ಲ. ಕೋ–ಆಪರೇಟಿವ್ ಇಲಾಖೆಯಲ್ಲಿರುವ ಅಧಿಕಾರಿಗಳು ಏನು ಮಾಡುತ್ತಾರೆ? ಕೋ–ಆಪರೇಟಿವ್ ಸೊಸೈಟಿಯ ಯಾರೋ ಒಬ್ಬ ಆರ್ಡಿನರಿ ಬಿಲ್ ಕಲೆಕ್ಟರೋ, ಕಾರ್ಯದರ್ಶಿಯೋ ಆಗಿದ್ದರೆ, ಅವರಿಗೆ ಬೂಟಿನಲ್ಲಿ ಹೊಡೆಸಿ ಅವರನ್ನು ತಂದು ಜೈಲಿಗೆ ಹಾಕಿಸುತ್ತೀರಿ. ಶಾಸಕರಾದಂಥವರು ಈ ಸಂಘದಲ್ಲಿ ಅಧ್ಯಕ್ಷರು ಉಪಾಧ್ಯಕ್ಷರಾಗಿ ಕುಳಿತುಕೊಂಡು ಮಾಡಿದಂಥ ಈ ಹೇಸಿಗೆ ತಿನ್ನುವ ಕೆಲಸವನ್ನು ಬಯಲಿಗೆ ಎಳೆಯಲಿಕ್ಕೆ ಆಗಲಿಲ್ಲ, ಇವರ ಮೇಲೆ ಕ್ರಮ ತೆಗೆದುಕೊಳ್ಳಲು ಆಗಲಿಲ್ಲ ಎಂದರೆ, ಕಾನೂನು ಇರುವುದು ಯಾರಿಗಾಗಿ? ಆ ಹಣ ಈಗ ಎಲ್ಲಿದೆ? ಅಲ್ಲಿ ಪದಾಧಿಕಾರಿಗಳಾಗಿದ್ದಂಥ ಕೆಲವು ಮಾಜಿ ಶಾಸಕರುಗಳನ್ನು ಅದನ್ನು ತಿಂದುಕೊಂಡು ಹೋಗಿದ್ದಾರೆ. ಅವರಿಂದ ಈ ಹಣವನ್ನು ವಸೂಲಿ ಮಾಡಲಿಕ್ಕೆ ಆಗಲಿಲ್ಲವೆಂದರೆ ಇಡೀ ರಾಜ್ಯವನ್ನು ಸರ್ಕಾರ ಹೇಗೆ ನೋಡಿಕೊಳ್ಳುತ್ತದೆ? ಕೋ–ಆಪರೇಟಿವ್ ಇಲಾಖೆ ಹೇಗೆ ನೋಡಿಕೊಳ್ಳುತ್ತದೆ? ಈ ಇಲಾಖೆಯಲ್ಲಿ ರಿಜಿಸ್ಟ್ರಾರ್ ಇದ್ದಾರೆಯೇ, ಸೆಕ್ರೆಟರಿ ಇದ್ದಾರೆಯೇ? ಇವರೆಲ್ಲಾ ಏನು ಮಾಡುತ್ತಿದ್ದಾರೆ? ಈ ಹಣವನ್ನು ವಸೂಲಿ ಮಾಡಲು ಏಕೆ ಆಗಲಿಲ್ಲ ? ಇದನ್ನು ಬಹಿರಂಗಪಡಿಸಲು ಏಕೆ ಆಗಲಿಲ್ಲ? ತಾವು ಹಿರಿಯ ಸಚಿವರು, ತಾವು ಈ ಸೊಸೈಟಿಯ ಮೇಲೆ ಕ್ರಮ ತೆಗೆದುಕೊಂಡರೆ, ಇಡೀ ಕೋ–ಆಪರೇಟಿವ್ ಸೊಸೈಟಿಗಳಲ್ಲಿ ಯಾರ್‍ಯಾರು ಹಣ ಹೊಡೆಯುತ್ತಿದ್ದಾರೆ, ಅವರೆಲ್ಲಾ ಎಚ್ಚರವಾಗುತ್ತಾರೆ. ಹೌದಪ್ಪಾ, ಹಣ ದುರುಪಯೋಗವಾಯಿತೆಂದು ಶಾಸಕರುಗಳಿಗೇ ಬಿಡಲಿಲ್ಲ, ಅವರೇ ಪದಾಧಿಕರಿಗಳಾಗಿದ್ದರೂ

ಅವರನ್ನು ಹಿಡಿದು ಜೈಲಿಗೆ ಹಾಕಿಸಿದರು, ನಾವು ಸಂಘಗಳಲ್ಲಿ ಹಣ ತಿಂದರೆ ನಾವೂ ಉದ್ದಾರವಾಗುವುದಿಲ್ಲ ಎಂದು ಹೆದರುತ್ತಾರೆ. ಇವತ್ತು ಇಲ್ಲಿರುವವರಿಗೆ ಒಂದು ಕಾನೂನು, ಬೇರೆಯವರಿಗೆ ಒಂದು ಕಾನೂನೇ? ಹೀಗಾದರೆ ಇದು ಉಳಿಯುತ್ತದೆಯೇ? ದಯವಿಟ್ಟು ಹೇಳಿ 64ಪ್ರಕಾರ ಎನ್‌ಕ್ವೈರಿ ಆದಮೇಲೆ, ಕಲಂ 68ರ ಪ್ರಕಾರ ಕಾನೂನು ಕ್ರಮಕ್ಕೆ ನಿಮ್ಮ ಇಲಾಖೆ ಏಕೆ ತಡೆ ಒಡ್ಡಿತು? ಏಕೆ ಅವರ ಮೇಲೆ ಕ್ರಮ ಕೈಗೊಳ್ಳಲಿಲ್ಲ?

ಶ್ರೀ ಎಂ.ಪಿ. ಪ್ರಕಾಶ್ : ಕಲಂ 68ರ ಕೆಳಗೆ ಹಣವನ್ನು ವಸೂಲಿ ಮಾಡಿ ಕಳುಹಿಸಿ ಎಂದು ಈಗಾಗಲೇ ಉಪನಿಬಂಧಕರು ತಿಳಿಸಿದ್ದಾರೆ. ಮಾನ್ಯ ಶಾಸಕರು ಹೇಳಿದಂತೆ, ಅತ್ಯಂತ ಜವಾಬ್ದಾರಿಯುತವಾಗಿರತಕ್ಕಂಥ ಶಾಸಕರ ಗೃಹ ನಿರ್ಮಾಣ ಸಹಕಾರ ಸಂಘವೇ ಈ ರೀತಿಯ ಅವ್ಯವಹಾರಗಳಲ್ಲಿ ತೊಡಗಿದರೆ, ಇದು ಒಂದು ನಾಚಿಕೆಗೇಡಿನ ಪ್ರಸಂಗ. ಇಡೀ ನಮ್ಮ ಸಮುದಾಯದ ಮೇಲೆಯೇ ಬಂದಿರತಕ್ಕಂಥ ಒಂದು ಅಪವಾದ ಮತ್ತು ಅವರು ತಪ್ಪು ಮಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೇ ಕಣ್ಣಿಗೆ ಕಾಣುತ್ತಿದೆ. ಹಸಿರು ವಲಯದಲ್ಲಿರತಕ್ಕಂಥ ಜಮೀನನ್ನು ರಚನೆಗಾಗಿ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದು, ಜಮೀನು ಎಲ್ಲಿದೆ ಎಂದು ಗೊತ್ತಿಲ್ಲದೇ ಅದರ ದಾಖಲೆಗಳನ್ನು ನೋಡದೇ ಹಣವನ್ನು ಮುಂಗಡವಾಗಿ ಕೊಡುವುದು, ಬೈ–ಲಾದಲ್ಲಿ ಹಣವನ್ನು ಮುಂಗಡವಾಗಿ ಕೊಡಬೇಕು ಎಂದೂ ಕೂಡ ಇಲ್ಲ. ಇಂಥವುಗಳೆಲ್ಲಾ ಆಗಿದೆ. ಹೋದವಾರ ಕೂಡ ನಾನು ಹಿರಿಯ ಸಚಿವರಲ್ಲಿ ಕೇಳಿದ್ದೇನೆ, ಅಕಸ್ಮಾತ್ತಾಗಿ ನಾನು ಇದನ್ನು ನೋಡಿದ್ದೇನೆ, ಏನಾದರೂ ಒತ್ತಡಗಳು ಬಂದರೆ ಏನು ಮಾಡಬೇಕು, ಏನು ಉತ್ತರ ಕೊಡಬೇಕು ಎಂದು ಕೇಳಿದ್ದೆನು. ನಾನು ಇದನ್ನು ತೇಲಿಸಿ ಹೇಳತಕ್ಕಂಥಾದ್ದಲ್ಲ, ಸಚಿವರೂ ಕೂಡ ಹೇಳಿದರು, ಹಾಗೆ ಇರುವುದಾದರೆ ನಾವು ಇದನ್ನು ಸೂಪರ್‌ಸೀಡ್ ಮಾಡಬೇಕಾದಂಥ ಪ್ರಶ್ನೆ ಬರುತ್ತದೆ ಎನ್ನುವ ಮಾತನ್ನು ಹೇಳಿದರು. ಕ್ರಿಮಿನಲ್ ಕೇಸ್ ಮೊದಲಾದಂಥವುಗಳನ್ನು ಹಾಕಬೇಕಾಗಿರುವ ಉಳಿದಂಥ ವಿಷಯಗಳ ಬಗ್ಗೆ ನಾಳೆ ಸಚಿವರ ಕಡೆಯಿಂದ ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಛೇರ್ಮನ್‌ರವರೇ, ಈ ಸಂಘದಲ್ಲಿ ಆಪದ್ಧನದ ಹಣ ಇದೆ. ಈ ಹಣವನ್ನು ಅದರಿಂದ ವಾಪಸ್ಸು ಕೊಡಿಸಿ. ತಾವು ಉತ್ತರ ಓದುವಾಗಲೇ ಯಾರೇ ಒಬ್ಬರು layman ಗೆ ಕೂಡ ಉದ್ದೇಶಪೂರ್ವಕವಾಗಿ ಇದರಲ್ಲಿ ಏನು ನಡೆದಿದೆ ಎಂಬುದು ಗೊತ್ತಾಗುತ್ತದೆ. ಇದು ಹಣ ತಿಂದುಕೊಂಡು ಹೋಗಲಿಕ್ಕೋಸ್ಕರವಾಗಿಯೇ ಇನ್ನೊಂದು blade company ರೀತಿಯಲ್ಲಿ ಮಾಡಿದಂಥ ವ್ಯವಹಾರವಾಗಿದೆ. ಸಾರ್ವಜನಿಕ ಜೀವನದಲ್ಲಿ ಜನರಿಂದ ಆಯ್ಕೆಯಾಗಿ ಇಲ್ಲಿ ಬಂದು ಸಾರ್ವಜನಿಕರಿಗೆ ಒಳ್ಳೆಯದು ಮಾಡುತ್ತೇವೆಂದು ಬಡಾಯಿ ಕೊಚ್ಚಿಕೊಂಡಿರತಕ್ಕಂಥ ಶಾಸಕರುಗಳೇ ಪದಾಧಿಕಾರಿಗಳಾಗಿ ಇಷ್ಟು ಹಣ ತಿಂದು ಮುಳುಗಿಸುತ್ತಾರೆ, ಜನರಿಗೆ ವಂಚನೆ ಮಾಡುತ್ತಾರೆಂದಾದರೆ, ಈ ಜನ ಊರಿನಲ್ಲಿ ಓಡಾಡಬಾರದು. ಇವರನ್ನು ತಂದು ಜೈಲಿನೊಳಗಡೆ ಇಡುವಂಥ ಕೆಲಸವನ್ನು ಬಿಗಿ ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇದರಂಥದ್ದೇ ಇನ್ನೊಂದು ಕೂಡ ಇದೆ. ಇಲ್ಲಿಯ Legislature ನೌಕರರ ಒಂದು ಸಂಘ ಇದೆ.

ಛೇರ್‌ಮನ್ : ಅದಕ್ಕೆ ಬೇರೆ ಪ್ರಶ್ನೆ ಕೇಳಿ. ಇದಕ್ಕೆ ಸಂಬಂಧಿಸಿದಂತೆ ಈ ಪ್ರಶ್ನೆ ಕೇಳಿ ಆಯಿತಲ್ಲವೇ?

ಶ್ರೀ ಅರಗ ಜ್ಞಾನೇಂದ್ರ : ಇವೆರಡು ಸಂಘಗಳು ಕೂಡ ವಿಧಾನಸೌಧದಲ್ಲಿ ನಡೆಯುವಂಥವು ಇವು ಸರ್ಕಾರದ ಮೂಗಿನಡೆಯಲ್ಲಿಯೇ ನಡೆಯುತ್ತಿರುವಂಥ ಸಂಘಟನೆ. ಇದರಲ್ಲಿ ಯಾರ್ಯಾರೋ ಬಾಂಬೆಯವರನ್ನು ಮಾರವಾಡಿಗಳನ್ನೆಲ್ಲಾ ಸದಸ್ಯರನ್ನಾಗಿ ಮಾಡಿಕೊಂಡು ಇಲ್ಲೂ ಲೋಪವಾಗಿದೆ. ಅನೇಕ ವಂಚನೆಗಳಾಗಿವೆ. ವಿಧಾನಸೌಧದಲ್ಲೇ ಇರುವಂಥ ಈ ಸಂಘಗಳಿಂದ ಈ ರೀತಿ ವಂಚನೆಗಳಾಗುವಾಗ ನಮ್ಮ ಇಲಾಖೆ ಸತ್ತು ಹೋಗಬಾರದು ಈ ವಿಧಾನಸೌಧದ ಪಾಲಿಗೆ ಆ ಇಲಾಖೆ ಬದುಕಿರಬೇಕು. ಅದಕ್ಕಾಗಿ ಅದು ಬದುಕಿದೆ ಎಂದು ತೋರಿಸಬೇಕಾದರೆ ಇದರ ಮೇಲೆ ಕ್ರಮ ಕೈಗೋಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಛೇರ್ಮನ್‌ರವರೆ, ನಮ್ಮ Legislature ನಲ್ಲೂ ನೌಕರರ House Building co-operative society ಇದೆ. ಅಲ್ಲಿ ನಮ್ಮ Members ಯಾರೂ ಇರುವುದಿಲ್ಲ. ಹೊರಗಡೆ ಇರುವವರೆಲ್ಲಾ ಬಂದು membership ಮಾಡಿಕೊಂಡು they are all doing humbug work. That also you should take care. It should be useful only for our legislature staff.

(ಈ) ವಿಷಯ : ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಒಂದನೇ ತರಗತಿಯಿಂದ ಆಂಗ್ಲ ಭಾಷೆ ಪಠ್ಯ ಆರಂಭಿಸುವ ಕುರಿತು.

ಶ್ರೀ ನೆ.ಲ.ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಛೇರ್ಮನ್‌ರವರೆ, ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಬಂದನೇ ತರಗತಿಯಿಂದ ಆಂಗ್ಲ ಭಾಷೆ ಪಠ್ಯ ಆರಂಭಿಸುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಛೇರ್ಮನ್‌ರವರೆ,

1) ಪ್ರಸ್ತುತ ಜಾರಿಯಲ್ಲಿರುವ ಶಿಕ್ಷಣದಲ್ಲಿ ಭಾಷಾ ನೀತಿಯ ಪ್ರಕಾರ ಒಂದರಿಂದ ಐದನೇ ತರಗತಿಯವರೆಗೆ ಕಲಿಕೆಯ ಮಾಧ್ಯಮ ಮಾತೃ ಭಾಷೆ ಅಥವಾ ಕನ್ನಡ ಆಗಿರಬೇಕು. ಈ ಕೆಳಗೆ ನಮೂದಿಸಿದ ಒಂದು ಭಾಷೆ (ಮಾತೃ ಭಾಷೆ) ಅಥವಾ ಕನ್ನಡ ಕಲಿಕೆಯ ಮಾಧ್ಯಮವಾಗಿ ಐದನೇ ತರಗತಿಯವರೆಗೆ ಕಡ್ಡಾಯವಾಗಿದೆ:–

(1) ಕನ್ನಡ (2) ತಮಿಳು (3) ತೆಲಗು (4) ಮಲಯಾಳಂ (5) ಮರಾಠಿ
(6) ಹಿಂದಿ (7) ಉರ್ದು (8) ಇಂಗ್ಲೀಷ್

2) ಕನ್ನಡೇತರಿಗೆ ಮೂರನೇ ತರಗತಿಯಿಂದ ಕನ್ನಡ ಭಾಷೆ ಒಂದು ಐಚ್ಛಿಕ ವಿಷಯವಾಗಿದೆ. ಇಂಗ್ಲೀಷ್ ಭಾಷೆಯು ಒಳಗೊಂಡಂತೆ ಈ ಕೆಳಗೆ ನಮೂದಿಸಿದ ಭಾಷೆಗಳ ಪೈಕಿ ಒಂದು ಭಾಷೆಯನ್ನು ಎರಡನೇ ಭಾಷೆಯನ್ನಾಗಿ ಆರನೇ ತರಗತಿಯಿಂದ ಕಲಿಸಬಹುದಾಗಿದೆ :

(1) ಕನ್ನಡ (2) ತಮಿಳು (3) ತೆಲಗು (4) ಮಲಯಾಳಂ (5) ಮರಾಠಿ
(6) ಹಿಂದಿ (7) ಉರ್ದು (8) ಇಂಗ್ಲೀಷ್

3) ಅದೇ ತರಗತಿ, ಅಂದರೆ, ಆರನೇ ತರಗತಿಯಿಂದ ಮೂರನೇ ಭಾಷೆಯನ್ನು ಕಲಿಸಲು ಆಸ್ಪದ ಇರುತ್ತದೆ. ಈ ಕೆಳಕಂಡ ಭಾಷೆಗಳ ಪೈಕಿ ಒಂದು ಭಾಷೆಯನ್ನು ಮೂರನೇ ಭಾಷೆಯನ್ನಾಗಿ ಕಲಿಸಬಹುದಾಗಿದೆ :